Notice regarding an application of Subraya Setti for a certificate under Act XXVII of 1860.

ಸ್ರ 1876ನೇ ಯಿಸವಿ ಸಿವಿಲ್ ಮಿಸಲೇನಿಯಸ್ ನಂ. 34.

ಇದರಿಂದ ಸಮುಸ್ತರಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ತಾಲ್ಲೂಕು ಯಲಹಂಕದಲ್ಲಿ ಯಿರುವ ಸುಬ್ಬರಾಯಕೆಟ್ಟಿ ಯಂಬವನು ತನ್ನ ತಂದೆ ಮುದ್ದೈಯಕೆಟ್ಟಿ ಲೀಣ 950 ರೂಪಾಯಿ ಬರಮಾಡಿ ಕೊಳ್ಳತಕ್ಕ ಬಗ್ಯೆ ಸ್ರ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ಸರಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷ್ಣ 1876ನೇ ಇಸವಿ ಮೇ ತಿಂಗಳು 24ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೆಯಾಗಿ ಆ ಮೊಬಲಗಿನ ಮೇಲೆ ಹಕ್ಕು ವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿಕೊಡಬಹುದು.

ಬತಾರೀಖು 24ನೇ ಮಾಹೆ ಏಪ್ರೆಲ್ 1876ನೇ ಇಸವಿ ಮೊಕ್ತಾಂ ಬೆಂಗಳೂರು.

Notice regarding an application of Linge Gauda for a certificate under Act XXVII of 1860.

ಸ್ರ 1876ನೇ ಇಸವಿ ಸಿವಿಲ್ ಮಿಸಲೇನಿಯಸ್ ನಂ. 36.

ಇದರಿಂದ ಸಮುಸ್ತರಿಗೂ ತಿಳಿಯಪಡಿಸುವದೇನಂದರೆ,—ಕ್ಯೊಸ್ಪ್ಯಾಟೆ ತಾಲ್ಲೂಕು ಹೊಡಿಕೆ ಜೊಸಹಳ್ಳಿ ಗ್ರಾಮದಲ್ಲಿ ಇರುವ ಲಿಂಗೇಗೌಡ ಸಂಭುವನು ತನ್ನ ತಂದೆ ಮುದ್ದೇಗೌಡನ ಲೀಣ 40 ರೂಪಾಯಿ ಬರಮಾಡಿಕೊಳ್ಳತಕ್ಕ ಬಗ್ಯೆ ಸ್ರ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ಸರ್ಟಿಫಿಕೆಟ್ ಕೊಡಿಸಬೇಕೆಂದು ಕೂಟ್ಟಿರುವ ಅಪ್ಲಿಕೇಷ್ಣ 1876ನೇ ಇಸವಿ ಮೇ ತಿಂಗಳ್ 26ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಮರ್ಶೆ ಆಗಲ್ಪಡುತ್ತೆಯಾಗಿ ಆ ಮೊಬಲಗು ಮೇಲೆ ಹಕ್ಕುವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿಕೊಡಬಹುದು.

ಬತಾರೀಖು 25ನೇ ಮಾಹೆ ಏಪ್ರೇಲ್ 1876ನೇ ಇಸವಿ, ಮೊಕ್ತಾಂ ಬೆಂಗಳೂರು.

A. W. C. LINDSAY,
Offg. Dy. Commr.

TUMKUR DISTRICT.

Notice regarding an application of Bore Gauda for a certificate under Act XXVII of 1860.

ತುಮಕೂರು ಡಿಸ್ಟ್ರಿಕ್ಟ್ ಡಿ॥ ಕಮ್ಮಿಷನರ್ ಕೋರ್ಟಿನಿಂದ.

ಇದರಿಂದ ಸಮುಸ್ತ ಜನಗಳಿಗೂ ಪ್ರಸಿದ್ಧಪಡಿಸುವದೇನಂದರೆ, ಚಿಕ್ಕನಾಯಕನಹಳ್ಳಿ ತಾಲ್ಲೂಕು ಚುಂಗನಹಳ್ಳಿ ಗ್ರಾಮದ ವಾಸಸ್ಥನಾಗಿ ಯಿದ್ದ ಘಾತೀ ಯಾವಪಿದ್ದೇಗೌಡ ಯಂಬುವನಿಗೆ ಯಿತರರಿಂದ ಬರಬೇಕಾಗಿ ಯಿರುವ 950 ರೂಪಾಯಿಗಳು, ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ಸರ್ಟಿಫಿಕೇಟ್ ಅಪೇಕ್ಷಿಸಿ, ಯಿವನ ಮಗ ಬೋರೆಗೌಡ ಯಂಬವನು ದಾಖಲ್ ಮಾಡಿ ಯಿರುವ ಅರ್ಜೀದನ್ನು 1876ನೇ ಇಸವಿ ಮೇ ತಿಂಗಳು 9ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ, ಯಿದಕ್ಕೆ ತಕರಾರ್ ಮಾಡುವವರ್ಯಾರಾದರೂ ಯಿದ್ದರೆ, ಈ ಕೋರ್ಟು ರೂಬರೂ ಸದರೀ ತಾರೀಖು ದಿವಿ 12 ಘಂಟೆಗೆ ಹಾಜರಾಗ ಬೇಕಾಗಿ ಯಿರುತ್ತೆ.

ತಾರೀಖು 6ನೇ ಮಾಹೆ ಏಪ್ರೆಲ್ 1876ನೇ ಇಸವಿ, ಮೊಕ್ತಾಂ ತುಮಕೂರು.

ತಾರೀಖು 18ನೇ ಏಪ್ರೆಲ್ 1876.

ತುಮಕೂರು ಡಿಸ್ಟ್ರಿಕ್ಟ್ ಕೊರಟಗೆರೆ ತಾಲ್ಲೂಕು ಹೊಸಹಳ್ಳಿಯಲ್ಲಿ ವೊಂದು ಬಿಳಬೂದುಬಣ್ಣದ ಬೇಟೆನಾಯಿ ಕಿಕ್ಕರುತ್ತೆ, ಯಿದರ ಬೆನ್ನಿನ ಮೇಲೆ ಚುಕ್ಕೆ ಗುರುತುಗಳು ಯಿವೆ, ಪೂರಾ ಬಳಧಿಧೆ, ಯಿದರ ಹಕ್ಕು ವುಳ್ಳಂತಾವರು, ತುಮಕೂರು ಕಸಬಾ ಸ್ಪೇಷ್ಯಲ್ ಇನ್ಸ್ಪೆಕ್ಟರಿಗೆ ಬರದುಕೊಳ್ಳಬೇಕು. ಸದರೀ ಇನ್ಸ್ಪೆಕ್ಟರ ಸ್ವಾಧೀನದಲ್ಲಿ ಸದರೀ ನಾಯಿಯು ಯಿಡಲ್ಪಟ್ಟಿರುತ್ತೆ.

Notice regarding an application of Parvatamma for a certificate under Act XXVII of 1860.

ಯಿದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧ ಪಡಿಸುವದೇನಂದರೆ,—ಕೊರಟಗೆರೆ ತಾಲ್ಲೂಕು ಕಸಬಾ ಕೊರಟಗೆರೆ ಗ್ರಾಮದ ವಾಸಸ್ಥನಾಗಿ ಇದ್ದ ಘನತೀಯೂದ ಚಿಕ್ಕನಹಳ್ಳಿ ಕರಿಬಸವಸೆಟ್ಟಿ ಯೆಂಬವನಿಗೆ ಯಿತರರಿಂದ ಬರಬೇಕಾಗಿರುವ 1000 ರೂಪಾಯಿ ಗಳು ವಸೂಲ್ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಅಪೇಕ್ಷಿಸಿ, ಇವನ ಹೆಂಡತಿ ಪಾರ್ವತಮ್ಮ ಯೆಂಬವಳು ದಾಖಲ್ ಮಾಡಿ ಇರುವ ಅರ್ಜಿಯನ್ನು 1876ನೇ ಇಸವಿ ಮೇ ತಿಂಗಳು 16ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ, ಇದಕ್ಕೆ ತಕರಾರ್ ಮಾಡುವರ್ಯಾರಾದರೂ ಯಿದ್ದರೆ, ಈ ಕೋರ್ಟು ರೂಬರೂ ಸದರೀ ತಾರೀಖು ದಿವಿ 12 ಘಂಟೆಗೆ ಹಾಜರಾಗ ಬೇಕಾಗಿ ಇರುತ್ತೆ.

ತಾರೀಖು 21ನೇ ಮಾಹೆ ಏಪ್ರಿಲ್ 1876ನೇ ಇಸವಿ, ಮೊಕ್ಕಾಂ ತುಮುಕೂರ.

Notice of sale of lac, the produce of the State-forests of the Túmkúr Taluk, on the 6th May 1876.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತಾಲ್ಲೂಕು ಮಜಕೂರಿಗೆ ಸೇರಿದ ಫ್ಯೋಟ್ ಫಾರೆಸ್ಟಿನ ಅರಗಿನ ಬಾಬ್ 1876—77ನೇ ಇಸವಿ. ಧಾತು ಸಂವತ್ಸರಕ್ಕೆ ಮೇ ತಾರೀಖು 6ನೇ ದಿವಿ 12 ಘಂಟೇಯಲ್ಲು ವುರುಡುಗೆರೆ ಸಮ್ಮತು ಅನಪನಹಳ್ಳಿ ಪೊಕ್ಕಾಂನಲ್ಲಿ ಪೋಟುಪೋಟೀ ಮಾಡಿಸಲ್ಪಡುತ್ತಾ ಇರ್ಪರಿಂದ ಇಚ್ಛೈಯುಳ್ಳವರೆಲ್ಲ ಆ ಪೊಕ್ಕಾಮಿಗೆ ಹಾಜರಾಗಿ ದರಖಾಸ್ತು ಮಾಡಬಹುದು ತಿಳಿಯುವದು.

ತಾರೀಖು 7ನೇ ಮಾಹೆ ಏಪ್ರಿಲ್ ಸ್ಯ 1876ನೇ ಇಸವಿ, ಮೊಕ್ಕಾಂ ತುಮುಕೂರು.

Notice of sale of the jungle produce of the State-forests of the Túmkúr Taluk, on the 5th May 1876.

ತುಮುಕೂರು ತಾಲ್ಲೂಕು ಕಚ್ಚೇರಿಯಿಂದಾ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸಾಲೀಹಾಲ್ 1876—77ನೇ ಇಸವಿ ಧಾತು ಸಂವತ್ಸರಕ್ಕೆ ತಾಲ್ಲೂಕು ಮಜಕೂರು ಜಂಗಲೀ ಪಸಾರೆ ಬಾಬುಗಳನ್ನು ಹರಾಜು ಮಾಡತಕ್ಕ ತಪಸೀಲ್.

ಫ್ಯೋಟ್ ಫಾರೆಸ್ಟಿನ ಫಸಾರೆ ಬಾಬ್ ಅಂದರೆ, ಆಳಲೇಕಾಯಿ, ತಾರೇಕಾಯಿ, ಪಪ್ಪಳೀಜಕ್ಕೆ, ಹುಣಸೆ, ಹೊಂಗೆ, ಗೇರುಬೀಜ ರಂಗಿನಗಿಡ ಮುಂತಾದ ಫಸಲು ನಂದೀದುರ್ಗ ಡಿವೀಜ್ ಫಾರೆಸ್ಟ್ ಅಸಿಸ್ಟೆಂಟ್ ಕ್ಯಸರ್‌ವೇಟರ್ ಸಾಹೆಬರವರ 26ನೇ ಮಾರ್ಚೀ 1940—504ನೇ ನಂಬರ್ ಹುಕ್ಕುಂ ಪ್ರಕಾರ.

1 ಕೋರು ಸಂಮತು ಜಿನಗದ ಪಟ್ಟದ ಡಿಸ್ಟ್ರಿಕ್ಟು ಕಾಡಿನ ಪಸಾರೇ ಬಾಬು.
ವೇವರಾಯದುರ್ಗ ಜಂಗಲೀ ಬೈಕಿ ಡಿಸ್ಟ್ರಿಕ್ಟು ಕಾಡಿನಲ್ಲಿರತಕ್ಕ ಪಸಾರೇ ಬಾಬು.
ಕೋರು ಸಂಮತು ಸೊಂದೇನ ಹಳ್ಳಿ ಕಣಿವೆ ಡಿಸ್ಟ್ರಿಕ್ಟು ಕಾಡು ಪಸಾರೇ ಬಾಬು.

ಈ ಪ್ರಕಾರ ಮೇ ತಿಂಗಳು 6ನೇ ತಾರೀಖಿನ ದಿವಿ 12 ಘಂಟೆಗೆ ವುರುಡಿಗೆರೆ ಸಂಮತು ಅನವನಹಳ್ಳಿ ಪೊಕ್ಕಾಮಿನಲ್ಲಿ ನಮ್ಮ ರೂಬರೂ ಹರಾಜು ಮಾಡಲ್ಪಡುತ್ತೆಯಾಗಿ ಯಿಚ್ಛೈಯುಳ್ಳವರೆಲ್ಲ ಆಟ್ಟೈಮಿಗೆ ಸರಿಯಾಗಿ ಹಾಜರಾಗಿ ಪೋಟುಪೋಟಿ ಮಾಡಬಹುದು. ಹರಾಜು ಆಖೈರಾದ ಬಳಿಕ ಹುಜೂರು ಜಾಹೀರಾತೀ ಯಿಂದ ಮಂಜೂರು ಹುಕ್ಕುಂ ತಲಪಿದ ಕೂಡ್ಲೆ ಕ್ರಮಪ್ರಕಾರ ಮುಚ್ಚಳಿಕೆ ತೆಗದಕೊಂಡು ಬಾಬು ಸುಪರ್ದು ಮಾಡಲ್ಪಡುತ್ತೆ. ತಿಳಿಯುವದು.

ತಾರೀಖು 5ನೇ ಏಪ್ರಿಲ್ 1876. ಮೊಕ್ಕಾಂ ತುಮುಕೂರು.

ಖೂನೀ ಅಪಾದನೆಪಟ್ಟ ನಾರಾಯಣಿ ಯೆಂಬವನ ಚಹರೇ ಪಟ್ಟಿ.

ತಾರೀಖು 17ನೇ ಏಪ್ರಿಲ್ 1876.

ಹೆಸರು ನಾರಾಯಣಿ, ತಂದೆ ಹೆಸರು ಭಂಗೀತಿಮ್ಮ, ವಾಸಸ್ಥಳ ಕೊರಟಗೆರೇ ತಾಲ್ಲೂಕು ವಡ್ಡರಪಾಳ್ಯ, ಜಾತಿ ಕಲ್ಲುವಡ್ಡರು, ವಯಸ್ಸು ಸುಮಾರ್ 30 ವರುಷಗಳು, ಎತ್ತರ ಸುಮಾರ್ ೫ ಅಡಿ, ಮೈ ಮೇಲಿನ ಗುರುತುಗಳು, ಬಣ್ಣಾ ಎಣ್ಣೆಗೆಂಪು, ಮು

ಖದ ಮೇಲೆ ಮೈಲೀ ಕಲೆ, ಯೆದೇ ಮೇಲೆ ಒಂದು ರೂಪಾಯಿ ಆಗಲಕ್ಕೆ ಒಂದು ಕರೇ ಮಚ್ಚೆ, ಬಲಗಿವಿಯಲ್ಲಿ ಜಿನ್ನದ ಉರುಟು ಹಾಕಿದ್ದಾನೆ.

ಈ ಖೈದಿ ಲಕ್ಷ್ಮೀ ಯೆಂಬವಳನ್ನು ಖೂ॥ ಮಾಡಿ 9ನೇ ಮಕ್ಕುಂ ರಾತ್ರಿ ತಪ್ಪಿಸಿಕ್ಕೊಂಡಿರುತ್ತಾನೆ.

E. S. LUDLOW,
Offg. Dy. Commr.

HASSAN DISTRICT.

ಮೈಸೂರ್ ಡಿಸ್ಟ್ರಿಕ್ಟಿಗೆ ಸರ್ಗವಾದ ಹಾಸನ ತಾಲ್ಲೂಕು ಮರಹಮ್ಮತ್ ಗುಮಸ್ತಾ ರಾಮಸ್ವಾಮ್ಯಯ್ಯಂಗಾರ್, ಕೆಲಸಕ್ಕೆ ಸಾಯರ್ ಜುನಾರ್ದಾರ್ ವೆಂಕಣ್ಣನವರು ಮೊಕರರ್ ಮಾಡಲ್ಪಟ್ಟರು.

H. E. MOTTET,
Dy. Commr.

KADUR DISTRICT.

Descriptive roll of one Badé Saib, who escaped from the Tarikere Taluk Lock-up on the 9th March 1876.

ಕಡೂರು ಡಿಸ್ಟ್ರಿಕ್ಟ್ ಡೆ॥ ಕ॥ ಕೋರ್ಟಿನಿಂದ.

ಮೊಕದ್ದಮೆ ನಂಬರ್ 10—ಖೈದೀ ಹೆಸರು ಬಡೇಸಾಹೆಬ್—ತಕ್ಕೀರು ಯಿಂಡಿಯರ್ ಪೆನಲ್‌ಕೋಡ್ 380ನೇ ಸೆಕ್ಷನ್ ಪ್ರಕಾರ ಶಿಕ್ಷಿಸತಕ್ಕದ್ದು—ತಂದೆಯ ಹೆಸರು ತುರ್ಮೆಕೆರೆ ಯಿಮಾಂಸಾಬ್—ಜಾತಿ ಮುಸಲ್‌ಮಾನರವ—ವಯಸ್ಸು 22—ವಾಸಸ್ಥಳ ತರೀಕೆರೆ ಕಸಬಾ—ಯತ್ತರ ಪ್ರಮಾಣ ಅಡಿ 5—ಅಂಗುಲ 3—ಕಸಬ್ ಜಿರಾಯಿತು—ಜಹರೇ ಬಲ ಭುಜದಮೇಲೆ $\frac{3}{4}$ ಅಂಗುಲ ಅಗಲಾ 1 ಅಂಗುಲ ವುದ್ದದ ಬಾಬತು ತರದ ಕಲೇಯಿದೆ ಬಲಗಡೇ ಪಾರ್ಶ್ವ ಬೆನ್ನಿನಮೇಲೆ ಅವರೇಬ್ಯಾಳೆ ಅಗಲ 2 ಕಲೆಗಳು ಯಿವೆ ಬಲಗಡೆ ಮೊಣಕಾಲುಮೇಲೆ ಮೂರುಕಾಸಿನ ಅಗಲ ಕುರುಮಿನ ಕಲೇ ಯಿದೆ. ನೀಳಮುಖ ಸಮದೃಷ್ಟಿ ಗಡ್ಡಾ ಬಿಟ್ಟು ಯಿದ್ದಾನೆ. ಕಿವಿ ಚುಚ್ಚಿಯಿಲ್ಲ ಮಟ್ಟತರದ ಯಣೆಗೆಂಪಿನ ಆಳು. ಯಿತನು ತರೀಕೆರೆ ತಾಲ್ಲೂಕು ಲಾಕಪ್ಪಿನಲ್ಲಿಡಲ್ಪಟ್ಟರುವಾಗ್ಯೆ 1876ನೇ ಮಾರ್ಚಿ 9ನೇ ಮಕ್ಕುಂ ರಾತ್ರಿ ಫರಾರಿ ಯಾಗಿರುತ್ತಾನೆ.

ತಾರೀಖು 15ನೇ ಏಪ್ರಿಲ್ 1876.

ಮದರಾಸ್ ನವನಾದ ಮಹಮ್ಮದ್ ಅಬ್ದುಲ್ ಲತೀಫ್ ಯೆಂಬ, ಕನ್ನಡ ಜಿಲ್ಲಾ ಕಾರಕೂನ್ ಸಂತೆಯುಂಬ ಸಳದ ವರ್ತಕನ, ಮದರಾಸ್ ಸರ್ಕಲ್ ಬಾಬತು $\frac{4}{4}$ 55893ನೇ ನಂಬರ್ ಉಳ್ಳ 50 ರೂಪಾಯಿಗಳ ಒಂದು ಕರೆನ್ಸಿ ನೋಟ್ 1876ನೇ ಮಾರ್ಚಿ 11ನೇ ಮಕ್ಕುಂನಲ್ಲಿ ಜೋರೀಯಾದಂತೆ ತಿಳಿಯಬಂದ ಸಬಬ್ ಸದರೀ ನೋಟನ್ನು ಒಬ್ಬರೂ ತೆಗದುಕ್ಕೊಳ್ಳ ಕೂಡದೆಂತಲೂ, ನಗದ್ ಮೊಬಲಗಿಗೆ ಬದಲಾಗಿ ಸದರೀ ನೋಟ್ ಪಾವತೀ ಬಂದ ಪಕ್ಷಕ್ಕೆ ಆನಂಗತಿಯನ್ನು ಕೂಡ್ಲೆ ಪೋಲೀಸಿಗೆ ರಿಪೋರ್ಟು ಮಾಡತಕ್ಕದ್ದೆಂದು ಕೋರೋಣಾಗುತ್ತೆ.

Notice of sale of occupied land in the Chikmagalur Taluk in satisfaction of Government dues.

1. ಇದರಿಂದ ತಿಳಿಸಲ್ಪಡುವದೇನಂದರೆ, ಸರ್ಕಾರ ಹಣ ಕೊಡಲಿಕ್ಕೆ ತಪ್ಪಿದ ಈ ಕೆಳಗೆ ಕಂಡ ಜನಗಳಿಂದ ಸಲ್ಲತಕ್ಕ ಜಮ್ಮಿ ಕಂದಾಯದ ಬಾಕೀ ಸವಾಧಾನಕೋಸ್ಕರ ಜಫ್ತಾದ್ದರಲ್ಲಿ ವಿಂಗಡಿಸಲ್ಪಟ್ಟ ಈ ಕೆಳಗೆ ಕಂಡ ಜಮ್ಮಿಗಳಲ್ಲಿ, ಹಾಲೀ ರಿಜಿಸ್ಟರಾದ ಜಮ್ಮಿ ಹಿಡುವಳೀದಾರನ ದರೋಬಸ್ತು ಹಕ್ಕುದಾರಿಗಳೂ, ಕಡೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರು ತಾಲ್ಲೂಕು ಈ ಕೆಳಗೆಕಂಡ ಗ್ರಾಮದಲ್ಲಿ ಆಯಾಯ ತಾರೀಖುಗಳಲ್ಲಿ ಹರಾಜ್ ಮೂಲಕ ವಿಕ್ರಯಿಸಲ್ಪಡುವದು. ಸದರೀ ಹಕ್ಕುಗಳ ವಿಷ್ಟಾಂಶಗಳು ಕೊಡನೆ ಜಮ್ಮಿಗಳು ಚಡದರಖಾಸ್ತುದಾರಿಗೆ ವಿಕ್ರಯಿಸಲ್ಪಡುವದು.

2. ಕ್ರಯದಾರನು ಜಮ್ಮಿಗಳಿಗೆ 18 ನೇ ಇಸವಿ ಪೂರಾ ಆಗಲಿ (ಉಳಿದ ಕಾಲಕ್ಕ್ರಾಗಲಿ ಸಂದರ್ಭ ಬಿದ್ದಂತೆ) ಮಜಕೂರಿಗೆ ಸಲ್ಲಬೇಕಾದ ಕಂದಾಯವು ಈ ಕೆಳಗೆ ಬರುವ ತಖ್ತೆಯಲ್ಲಿ ತಖ್ಯೀಲ್‌ವಾರ್ ತೋರಿಸಲ್ಪಟ್ಟಪ್ರಕಾರ 189—11—7 ರೂ॥ ಪಾಯಿಗ್ಯಾಗುತ್ತವೆ. ಹರಾಜ್‌ನಿಬಂಧನೆಗಳು ಹರಾಜ್‌ಕಾಲದಲ್ಲಿ ತಿಳಿಸಲ್ಪಡುವದು.

ತಾಲೂಕು	ಗ್ರಾಮ	ಕಂದಾಯ ಕೊಡಲಿಕ್ಕೆ ತಪ್ಪಿದವನ ಹೆಸರು	ಜಮೀನು ತರಿಯೇ ಖುಷ್ಕಿಯೇ ಯಾ ಬಾಗಾಯಿತೇ ಮತ್ತು ಕಂದಾಯ ಕೊಡಲಿಕ್ಕೆ ತಪ್ಪಿದವನ ಬಾಕಿ ಕಟ್ಟಲಿಗಳು ಯಾವದೂರಲ್ಲಿರುತವೆಯೆ.	ಜಮೀನ್		ಅಂದಾಜು ಬೀಜವರಿ			ಕಂದಾಯ			ಸಾಲ ಮಜಕೂರಿಗೆ ಕ್ರಯದಾರನಿಂದ ಸಲ್ಲತಕ್ಕ (ಬಾಕಿ ಮಾಯಿ) ಮೊಬಲಗು.		
				ನಂಬರ	ಹೆಸರು	ಖಂಡಿ	ಕೂ	ಪ.	ರೂ.	ಆ.	ಪೈ.			
ಬೆಕ್ಕಹಳ್ಳಿ ಮಗಳೂರು	ಬಳೇಹಳ್ಳಿ ಬಸವನಹಳ್ಳಿ	ಬಾರಿನ ಜಮಾಲಸಾಬಿ	ತರೀ	112	ಗದ್ದೆ	0	12	8	7	2	0	0	0	0
	ಡಿಟೋ	ಮೈಸೂರು ದಾವಲಸಾಬಿ	ಡಿಟೋ	74—75	ಡಿಟೋ	0	10	0	7	12	11	0	8	0
	ಡಿಟೋ	ಮೈಸೂರು ಹಸರ್ಮೊಹದೀಸಾಬಿ	ಡಿಟೋ	34	ಡಿಟೋ	0	10	0	8	9	5	0	8	0
	ಡಿಟೋ	ಸಾಲಾರಸಾಬಿ ಪಹಿವಟ್ಟುದಾರ ಮೂಗಡೀ ನರಸಪ್ಪ	ಡಿಟೋ	68	ಡಿಟೋ	1	0	0	4	11	7	0	8	0
	ಚಿಕ್ಕಮಗಳೂರು	ಕಡಿದ್ದಾಂತಿ ನೀಲಕ್ಕ	ಡಿಟೋ	205—58	ಡಿಟೋ	1	15	0	42	11	4	0	8	0
	ಡಿಟೋ	ಕೇಶವರಾಯನ ನಾಗಂಣ.	ಬಾಗಾಯತು.	184	ತೋಟ	0	8	1	6	11	0	0	8	0
	ಬಳೇಹಳ್ಳಿ	ದಂಟಿನಮಕ್ಕಿ ಸಂಣ.	ತರೀ	94—150	ಗದ್ದೆ	0	5	0	4	8	7	0	8	0
				149—109	ಡಿಟೋ	0	10	0	8	5	2			
	ಡಿಟೋ	ಮಸ್ತ್ಯಸಾಬಿ	ಡಿಟೋ	145	ಡಿಟೋ	0	1	0	4	1	10	0	8	0
	ಡಿಟೋ	ಮಲ್ಲೇಗೌಡ	ಖುಷ್ಕೀ	28	ಹೊಲ	0	15	2	0	1	0			
			ತರೀ	12—13	ಗದ್ದೆ	0	10	0	5	10	9	1	0	0
				37—42	ಡಿಟೋ	0	5	0	4	8	7			
				144	ಡಿಟೋ	0	10	0	10	0	4			
	ಬಿಕ್ಕನಹಳ್ಳಿ	ಶಾ॥ ಸುಬ್ಬರಾಯ	ಖುಷ್ಕೀ	11	ಹೊಲ	0	8	0	7	12	1	1	0	0
			ತರೀ	455	ಗದ್ದೆ	0	1	12	2	0	1			
	ಕದರಮಿರಿ	ಬಲಗೈ ಕುದರೆ ಈರ	ಡಿಟೋ	415	ಡಿಟೋ	0	7	8	4	3	10	0	8	0
	ಕಂಬಿಹಳ್ಳಿ	ಷರಾಬ್ ನಾಗಂಣ	ಡಿಟೋ	220	ಡಿಟೋ	0	10	0	6	6	11	0	8	0
	ಸೂರಗೊಂಡನಹಳ್ಳಿ	ಕಾಂತೈಯ	ಖುಷ್ಕಿ	42	ಹೊಲ	0	1	8	5	11	6	0	8	0
	ರಾಜೆನ ಕೆರಿಯೂರು	ದೊಂಬೇರಾಮೈಯ ನಮಲ್ಲಪ್ಪ.	ಬಾಗಾಯತು	408	ತೋಟ	0	9	14	15	12	3	0	1	0
	ಪುಳಲೂರು	ಷರಾಬ್ ನಾಗಂಣ.	ತರೀ	954	ಗದ್ದೆ	0	7	0	3	1	2	0	8	0
			ಖುಷ್ಕಿ	855	ಹೊಲ	0	14	0	0	4	11			
	ತಳೇಹಳ್ಳಿ	ಮಲ್ಲೇಗೌಡ	ಡಿಟೋ	357	ಡಿಟೋ	0	0	14	0	3	9			
			ತರೀ	63	ಗದ್ದೆ	0	10	0	2	13	5			
			ಡಿಟೋ	77	ಡಿಟೋ	0	2	2	2	2	0	1	0	0
			ಡಿಟೋ	67	ಡಿಟೋ	0	10	0	2	13	5			
			ಡಿಟೋ	68	ಡಿಟೋ	0	5	0	1	6	8			
			ಡಿಟೋ	47	ಡಿಟೋ	1	0	0	6	9	11			
			ಡಿಟೋ	147	ಡಿಟೊ	0	10	0	2	13	5			
			ಡಿಟೋ	148	ಡಿಟೋ	0	10	0	2	13	5			

ಹರಾಜು ತಾರೀಖುಗಳು.

ಬಳೆಹಳ್ಳಿ ಬಸವನಹಳ್ಳಿ ಬಾ॥ ಹಿಡುವಳಿ ಹರಾಜು 15 5 76
ಬಳಹಳ್ಳಿ ಬಾಕೀದಾರನ ಹಿಡುವಳೀ ಹರಾಜು 16 5 76
ಸೂರಗೊಂಡನಹಳ್ಳಿ ಬಾ॥ ಹಿಡುವಳೀ ಹರಾಜು 15 5 76
ತಳೇಹಳ್ಳಿ ಬಾಕೀದಾರನ ಹಿಡುವಳೀ ಹರಾಜು 17 5 76

Notice regarding the sale of occupied lands in the Lakvalli and Chikmagalur Taluks in satisfaction of Government dues.

1. ಇದರಿಂದ ತಿಳಿಸಲ್ಪಡುವದೇನಂದರೆ—ಸರ್ಕಾರ ಹಣ ಕೊಡಲಿಕ್ಕೆ ತಪ್ಪಿದವರುವ ಕೆಳಗೆ ನಮೂದಿಸುವವರಿಂದ ಸಲ್ಲ ತಕ್ಕ ಜಮೀನ್ ಕಂದಾಯದ ಬಾಕೀ ಸಮಾಧಾನ ಕೊಡ್ಸಲಿಕ್ಕೆ ಸರ್ಕಾರ ಜಫ್ತಾದ್ದರಲ್ಲಿ ವಿಂಗಡಿಸಲ್ಪಟ್ಟು ಈ ಕೆಳಗೆ ಕಂಡ ಜಮೀನ್‌ಗಳಲ್ಲಿ ಹಾ ರಿಜಿಸ್ಟ್ರರಾದ ಜಮೀನ್ ಹಿಡುವಳೀದಾರರ ದರ್ಖೋಬಸ್ತು ಹಕ್ಕುದಾರೀಗಳೂ ಕಡೂರು ಡಿಸ್ಟ್ರಿಕ್ಟು ಕೆಳಗೆ ನಮೂದಿರುವ ತಾಲ್ಲೂಕು ಆಯಾಗ್ಯಾನುವಲ್ಲಿ ಏಪ್ರೀಲ್ ಮಾಹೆಯಲ್ಲು ಸರಾಜ್ ಮೂಲಕ ವಿಕ್ರಯಿಸಲ್ಪಡುವದು. ಆ ಮಾ ಗ್ಯಾನುವಲ್ಲಿ ಹರುವೇ ಸಮಾಪ ಹ ರಾಜಿಗೆ ಆರಂಭಿಸುವದು. ಸದರೀ ಹಕ್ಕುಗಳ ವಿಸಿಷ್ಟಾಕಗಳೊಡನೆ ಜಮೀನ್‌ಗಳು ಚಡವರಖಾಸ್ತುದಾರರಿಗೆ ವಿಕ್ರಯಿಸಲ್ಪಡುವದು.

2. ಕ್ರಯದಾರನು ಜಮೀನ್‌ಗಳಿಗೆ 1876ನೇ ಇಸವಿ ಪೂರಾತಿಗಳಿ (ಉಂದ ಕಾಲಕ್ಕಾಗಲಿ ಸಂದರ್ಭ ವಿಶ್ಚಂತೆ) ಮಜ ಕೂರಿಗೆ ಸಲ್ಲತಕ್ಕಾದ ಕಂದಾಯವು ಈ ಕೆಳಗೆ ಬರುವ ಪಟ್ಟಿಯಲ್ಲಿ ತಪ್ಪಿಲ್ವಾರ್ ಹೇಳಲ್ಪಟ್ಟ ಪ್ರಕಾರ 40 ಟ --12—0 ರೂ ಪಾಯಿಗಳಾಗುತ್ತವೆ. ಹರಾಜು ನಿಬಂಧನೆಗಳು ಹರಾಜು ತಾರೀಖಿನಲ್ಲಿ ತಿಳಿಸಲ್ಪಡುತ್ತೆ.

ತಾಲ್ಲೂಕು	ಗ್ರಾಮ	ಕಂದಾಯ ಕೊಡಲಿಕ್ಕೆ ತಪ್ಪಿದವನ ಹೆಸರು	ಜಮೀನು ತರಿಯೇ ಖುಷ್ಕಿಯೇ ಯಾ ಬಾ ಗಾಯಿತ ಮತ್ತು ಕಂ ದಾಯ ಕೊಡಲಿಕ್ಕೆ ತ ಪ್ಪಿದವನ ಬಾ॥ ಕಟ್ಟಿ ಗಳು ಯಾವದಾದರೂ ಯಿರುತವೆಯೇ.	ಜಮೀನು ನಂಬರ್	ಜಮೀನು ಹೆಸರು	ಅಂದಾಜ್ ಬೀಜವರಿ ಖು.	ಅಂದಾಜ್ ಬೀಜವರಿ ಕೊ ಪ.	ಕಂದಾಯ ರೂ.	ಕಂದಾಯ ಆ	ಕಂದಾಯ ಪೈ	ಜಪ್ತಿಗೆ ಕ್ರಯವಾದ ಸಾಲಿಗೆ ಕಂದಾಯ (ಬುಕೀ ಪೈಸಾಯಿ)	ಒಟ್ಟಿಗೆ ಕಂದಾಯ (ಬುಕೀ ಪೈಸಾಯಿ)	ಒಟ್ಟಿಗೆ ಕಂದಾಯ (ಬುಕೀ ಪೈಸಾಯಿ)
ಬೈಸಿಕೆರೆ ಪಟ್ಟಿ	ಮುತ್ತಿನಕೊಪ್ಪ	ಇಮಾಂಸಾಬಿ	ತರೀ ಜಮೀನು	30	ಕೆಲ್ಲುಗುಡ್ಡೆ	4	0	0	10	4	11	0	8	0
	ಕಸವೆ	ಜನ್ನವೀರೈಯ	ಡಿಟೋ	14	ಕೆಲ್ಲಭಾವಿಗದ್ದೆ	10	0	0	25	12	3	1	0	0
	ಮುರವಿನ ಕ	ಮೇದರ ಮಲ್ಲ	ಡಿಟೋ ಕಟ್ಟಿ ಸಹಾ	6	ಗದ್ದೆ	6	0	0	12	0	10	0	8	0
	ಪಾಯಿಗೊಂ	ಸಂಜೈಯ	ಖುಷ್ಕೀ	56	ಹಂಗ್ರಹೊಲ	0	2	0	8	9	5	0	8	0
	ಡನಹಳ್ಳಿ													
	ತೇಗೂರು	ತಿಂಮ	ತರೀ ಮನೆ ಸಹಾ	241	ಗದ್ದೆ	0	10	0	5	10	9	0	8	0
	ಹೊನ್ನೇನಹಳ್ಳಿ	ಸಟ್ಟಹಳ್ಳಿ ತಿಂಮಾ	ಖುಷ್ಕೀ	252	ಹೊಲ	1	6	11	10	0	4			
				253	ಡಿಟೋ	0	7	1	2	1	2			
				254	ಡಿಟೋ	0	15	12	5	14	6			
				255	ಡಿಟೋ	0	19	11	7	6	4			
				256	ಡಿಟೋ	0	0	6	0	2	3			
				257	ಡಿಟೋ	0	1	2	0	7	7	1	0	0
				258	ಡಿಟೋ	0	9	3	3	7	2			
				259	ಡಿಟೋ	0	5	2	1	15	9			
				260	ಡಿಟೋ	0	13	0	0	5	1			
				261	ಡಿಟೋ	0	2	4	0	13	6			
				262	ಡಿಟೋ	0	1	11	0	9	1			
				263	ಡಿಟೋ	0	11	11	0	10	2			
				264	ಡಿಟೋ	0	5	10	2	1	9			
				265	ಡಿಟೋ	0	2	13	1	0	10			
				266	ಡಿಟೋ	0	0	6	0	2	7			
	ಸಿರೇಮಗಳೂರು	ದುಂಮೈಯ	ತರೀ	1077	ಗದ್ದೆ	0	5	0	5	12	8	0	8	0
	ಹಾರ್ಜಿಹಳ್ಳಿ	ದೆವೇಗೌಡ	ಡಿಟೋ	38	ಡಿಟೋ	0	10	0	3	1	2			
				39	ಡಿಟೋ	0	10	0	3	1	2	1	0	0

ತಾಲ್ಲೂಕು	ಗ್ರಾಮ	ಕಂದಾಯ ಕೊಡಲಿಕ್ಕೆ ತಪ್ಪಿದವನ ಹೆಸರು	ಜಮೀನು ತರೀಯೇ ಖುಷ್ಕಿಯೆ. ಯಾ ಬಾಗಾಯತೇ, ಮೆತ್ತು ಕಂದಾಯ ಕೊಡಲಿಕ್ಕೆ ತಪ್ಪಿದವನ ಬಾ॥ ಪಟ್ಟಿಗಳು ಯಾವದಾದರೂ ಯಿರುತವೆಯೇ.	ಜಮೀನ್		ಅಂದಾಜಾ ಬೀಜವರೀ			ಕಂದಾಯ			ಸಾಲ್‌ವಜಾ ಕೂರಿಗೆ ಕ್ಕಯು ದಾರನಿಂದ ಸಲ್ಲತಕ್ಕ (ಬಾಕೀ ಶೀವಾಯಿ) ಮೊಬಲಗು		
				ನಂಬರ	ಹೆಸರು	ಖಂಡಿ	ಕೊ	ಪ	ರೂ.	ಆ.	ಪೈ.			
ಚಿಕ್ಕನಾಯಕನಹಳ್ಳಿ	ಹಾರ್ಜಿಹಳ್ಳಿ	ದೇವೇಗೌಡ	ತರೀ	40	ಗದ್ದೆ	0	10	0	3	1	2			
				41	ಡಿಟೋ	0	10	0	3	1	2			
	ಡಿಟೋ	ಲಿಂಗೇಗೌಡ	ಡಿಟೋ	11	ಡಿಟೋ	0	15	0	5	10	10			
				12	ಡಿಟೋ	1	10	0	10	11	1	1	0	0
				15	ಡಿಟೋ	2	2	8	12	15	2			
				35	ಡಿಟೋ	0	10	0	3	12	6			
	ತಳಿಹಳ್ಳಿ	ವೀರೇಗೌಡ	ಡಿಟೋ	0	ಮಾವಿನ ಗದ್ದೆ	0	2	8	0	11	4	0	8	0
	ಡಿಟೋ	ಹುಸೇನಸಾಬಿ	ಡಿಟೋ	33	ಅಲಿನ ಗದ್ದೆ	0	15	0	4	15	5			
				35	ನೆಲ್ಲಿಮಕ್ಕಿ	0	10	0	2	13	5			
				62	ಮಾವಿನ ಗದ್ದೆ	0	10	0	2	15	5			
				32	ಡಿಟೋ	0	10	0	3	5	0			
	ಈಚಿಹೊಳೆ	ಮಲ್ಲೇಗೌಡ	ಡಿಟೋ	104	ದೇವರ ಗದ್ದೆ	1	0	0	5	10	9			
				107	ಕರವದ ಗದ್ದೆ	1	0	0	5	10	9	1	0	0
				137	ಮಳಲ ಗದ್ದೆ	1	0	0	5	10	9			
				108	ಹಾರಿ ಗದ್ದೆ	1	10	0	8	8	2			
	ಡಿಟೋ	ಮಲ್ಲಪ್ಪ	ಡಿಟೋ	3	ಗದ್ದೆ	1	5	0	7	1	6			
				4	ಡಿಟೋ	0	1	2	0	6	1			
				8	ಡಿಟೋ	0	1	0	0	4	7			
				6	ಡಿಟೋ	0	15	0	4	4	1	1	0	0
				5	ಡಿಟೋ	0	7	2	0	11	4			
				11	ಡಿಟೋ	1	0	0	5	10	9			
				9	ಡಿಟೋ	1	0	0	5	10	9			
				10	ಡಿಟೋ	1	5	1	7	6	0			
	ಅಂಬಳೆ	ಕೆಂಪಪ್ಪ	ಡಿಟೋ	1379	ಗದ್ದೆ	0	5	0	3	12	6	0	8	0
	ಡಿಟೋ	ಸೂರ	ಡಿಟೋ	118	ಡಿಟೋ	0	5	0	4	2	7	0	8	0
	ಡಿಟೋ	ಸಗನ್ನಾ	ಡಿಟೋ	326	ಡಿಟೋ	0	10	8	6	9	11	0	8	0
				595	ಡಿಟೋ	0	10	0	3	12	6			
	ಡಿಟೋ	ವೆಂಕಂಪೈಯ	ಡಿಟೋ	17	ಡಿಟೋ	0	5	0	3	0	5			
			ಡಿಟೋ	370	ಡಿಟೋ	0	10	0	7	9	0	1	0	0
			ಡಿಟೋ	760	ಡಿಟೋ	0	5	0	5	3	3			
				800	ಡಿಟೋ	0	5	0	2	1	3			
				795	ಡಿಟೋ	0	5	0	1	9	9			
	ಡಿಟೋ	ಗುರುಬಸವಾ	ಡಿಟೋ	385	ಡಿಟೋ	0	7	8	4	11	8	0	8	0
	ಡಿಟೋ	ತಂವಂಪೈಯ	ಬಾಗಾಯತು	285	ತೋಟ	0	5	0	3	12	6	0	8	0
	ಡಿಟೋ	ಕೆಂಚವ್ಯಾ	ತರೀ	770	ಗದ್ದೆ	0	10	0	3	12	6			
				744	ಡಿಟೋ	0	10	0	3	15	6	0	1	0
				782	ಡಿಟೋ	0	10	0	3	12	6			

ಹರಾಜು ತಾರೀಖುಗಳು.

ಮುತಿ ನಕೊಪ್ಪ ಬಾ॥ ಹಿಡುವಳೀ ಹರಾಜು	5	5	1876	ಹಿರೇಮಗಳೂರು ಬಾ॥ ಹಿಡುವಳೀ ಹರಾಜ್	4	5	1876
ಕೆಸವೆ ಬಾಕೀದಾರನ ಡಿಟೋ ಹರಾಜ್	6	5	76	ಹಾರ್ಜಿಹಳ್ಳಿ ಬಾಕೀದಾರನ ಹಿಡುವಳೀ ಹರಾಜು	2	5	76
ಮುರವಿನಕಟ್ಟೆ ಬಾಕೀದಾರನ ಡಿಟೋ ಹರಾಜ್	4	5	76	ತೊಹಳ್ಳಿ ಬಾಕೀದಾರನ ಹಿಡುವಳೀ ಹರಾಜು	3	5	75
ಪಾಯಿಗೊಂಡನಹಳ್ಳಿ ಬಾ॥ ಹಿಡುವಳಿ ಹರಾಜು	5	5	76	ಈಚಹೊಳೆ ಬಾಕೀದಾರನ ಹಿಡುವಳೀ ಹರಾಜು	3	5	75
ತೇಗೂರು ಬಾಕೀದಾರನ ಹಿಡುವಳೀ ಹರಾಜು	4	5	76	ಅಂಬಳೆ ಬಾಕೀದಾರನ ಹಿಡುವಳೀ ಹರಾಜ್	5	9,10	75
ಹೊನ್ನೆನಹಳ್ಳಿ ಬಾಕೀದಾರನ ಹಿಡುವಳಿ ಹರಾಜು	8	5	76				

ರವಾನಾ ತಾರೀಖು 6ನೇ ಏಪ್ರೆಲ್ 1876ನೇ ಇಸವಿ, ಮೊಕ್ಕಾಂ ಚಿಕ್ಕಮಗಳೂರು.

P. KRISHNA RAO,
Dy. Commr.

COORG.

Notice cancelling the certificate granted to Jothiyappa under Act XXVII of 1860.

ಕೊಡಗು ಸೂಪ್ರಿಟೆಂಡೆಂಟ್ ಕೋರ್ಟ್‌ನಿಂದಾ.

ಇದರಿಂದ ಸರ್ವೇ ಜನರಿಗೂ ತಿಳಿಯಪಡಿಸುವದೇನಂದರೆ—ನರಶೀಪುರದಿಂದ ಬಂದು ಹಾಲೀ ವೀರರಾಜೆಂದ್ರಪೇಟೆಯಲ್ಲಿರುವ ಜೈನರಜೋತಿಯಪ್ಪ ಯೆಂಬವನು ಫೂತೀ ತನ್ನ ತಮ್ಮ ಸಾಂತಂಣಗೆ ಹೊರಗಿನಿಂದ ಬರತಕ್ಕ 500 ರೂಪಾಯಿ ಸಾಲ ವಸೂಲ್ ಮಾಡಿಕೊಳ್ಳುವದಕ್ಕೆ ಸ್ನ 1860ನೇ ಇಸವಿ 27ನೇ ಆಕ್ಟ್‌ಮೇರೆ ಸ್ನ 1872ನೇ ಇಸವಿ ಫಿಬ್ರವರೀ 3ನೇ ತಾರೀಖಿನಲ್ಲಿ ಈ ಕೋರಟಿನಿಂದ ಬಾಧ್ಯತೆ ಸರ್ಟಿಫಿಕೇಟ್ ತೆಗದುಕ್ಕೊಂಡು ವಸೂಲಿಮಾಡಿದ ಮೊಬಲಗಿನತಪ್ಪೆಯನ್ನು ಒಂದು ವರ್ಷದ ವಾಯಿದೆ ಅನಂತರ ಕೋರ್ಟ್‌ನವರು ಅಪೇಕ್ಷಿಸಿದ್ದಾಗ್ಯೂ ಪ್ರಮಾಣದ ಮೇಲೆ ಹಾಜರುಪಡಿಸದೆ ಹೋದ್ದರಿಂದ ಸ್ನ 1870ನೇ ಇಸವೀ 7ನೇ ನಂಬರ್ ಕೋರ್ಟ್ ಫೀಜುಆಕ್ಟಿನ 1ನೇ ಷೆಡ್ಯೂಲ್ 12ನೇ ಆರ್ಟಿಕಲ್ ಪ್ರಕಾರ ಸದರೀ ಜೋತಿಯಪ್ಪಗೆ ಕೊಟ್ಟಿರುವ ಸರ್ಟಿಫಿಕೇಟನು ರದ್ದುಮಾಡಿ ಯಿದೇ.

ಬತಾರೀಖು 10ನೇ ಏಪ್ರೆಲ್ 1876ನೇ ಇಸವಿ.

Notice regarding an application of Kaveramma for a certificate under Act XXVII of 1860.

ಸ್ನ 1876ನೇ ಇಸವಿ ಸಿವಿಲ್ ನಾನಾವಿಧ ಮೊಕದ್ದಮೂ ನಂಬರ್. 8

ಇದರಿಂದ ಸರ್ವೇ ಜನಗಳಿಗೂ ತಿಳಿಯಪಡಿಸುವದೇನಂದರೆ,—ಯಡೆನಾಲ್ಕ್‌ನಾಡು ತಾಲ್ಲೂಕುಸೈಕಿ ಬಿಟ್ಟಂಗಾಲ ಗ್ರಾಮದಲ್ಲಿ ಇರುವ ಕೊಂಕಣಸ್ತರ ಕಾವೇರಮ್ಮನು ಪೂತೀಪಟ್ಟ ತನ್ನಗಂಡ ಕೃಷ್ಣಯ್ಯನಿಗೆ ಹೊರಗಿನಿಂದ ಬರತಕ್ಕ 100 ರೂಪಾಯಿ ವಸೂಲ್ಮಾಡಿಕ್ಕೊಳ್ಳುವದಕ್ಕೆ ಸ್ನ 1860ನೇ ಇಸವಿ 27ನೇ ಆಕ್ಟ್ ಮೇರೆ ಬಾಧ್ಯತೆ ಸರ್ಟಿಫಿಕೇಟ್ ಕೊಡಿಸಿಕೊಡಬೇಕೆಂಬದಾಗಿ, ದರಖಾಸ್ತು ಮಾಡಿರುವ ಮೊಕದ್ದಮೂ ಸ್ನ 1876ನೇ ಇಸವಿ ಮೇ ತಾರೀಖು 17ನೇ ದಿನ ದಿವಿ 10 ಘಂಟೆಗೆ ಕೊಡಗು ಸೂಪ್ರಿಟೆಂಡೆಂಟ್ ಕೋರ್ಟು ಮೊಕ್ಕಾಂನಲ್ಲಿ ಹಿಯರಿಂಗ್ ಆಗುವದ್ದರಿಂದ ಇದಕ್ಕೆ ಯಾರಾದರೂ ಹಕ್ಕುದಾರು ಬಾಧ್ಯ ಪಟ್ಟವರು ಇದ್ದರೆ ಸದರೀ ತಾರೀಖಿನ ದಿನ ಆ ವ್ಯಾಳ್ಯಕ್ಕೆ ಸರಿಯಾಗಿ ಈ ಕೋರ್ಟಿನ ಮುಂದೆ ಹಾಜರಾಗಿ ವ್ಯವಹರಿಸಬಹುದು.

ತಾರೀಖು 17ನೇ ಏಪ್ರೆಲ್ ಸ್ನ 1876ನೇ ಇಸವಿ.

ಮಹದೇವಪೇಟೆ ಮ್ಯುನಿಸಿಪೆಲ್ ಸರಹದ್ದಿನ ವಳಗೆ ಕರಗುಪಡಿ ಬಗ್ಯೆ ಆವುದ್ ಮಾಡುವೆ ಜಿನಸುಗಳ ಮೇಲೆ ಮಾರ್ಕೆಟ್ ಫೀ ಸಿಯಾನೆ ಬಜಾರ್ ತೀರ್ವೆಯನ್ನು ಈ ಕೆಳಗೆ ನಮೂದ್ ಮಾಡಿರುವ ಸಾವಾನಿನ ಮೇಲೆ ವಸೂಲ್ಮಾಡುವ ಬಾಧ್ಯತೆಯನ್ನು ಪಡೆಯತಕ್ಕ ಬಗ್ಯೆ ಬರುವ ದರಖಾಸ್ತುಗಳನ್ನು ತೆಗದುಕ್ಕೊಳ್ಳಲಿಕ್ಕೆ ಮ್ಯುನಿಸಿಪೆಲ್ ಬೋಡ್ರು ಪ್ರೆಸಿಡೆಂಟರು ಸನ್ನದ್ಧರಾಗಿರುತ್ತಾರೆ.

ಈ ಗುತ್ತಿಗೆಯು ಸ್ನ 1876ನೇ ಇಸವಿ ಜೂಲೈ 1ರ ಲಾಗಾಯತು 1 ವರುಷಕ್ಕೆ ಮಾತ್ರ ಕೊಡಲ್ಪಡುವದು. ಇದರ ಷರತ್ತುಗಳು ಕೊಡಗು ಸೂಪ್ರಿಟೆಂಡೆಂಟ್ ಆಫಿಸ್‌ನಲ್ಲಿಯೂ ಮಹದೇವಪೇಟೆ ಕಜೇರಿಯಲ್ಲಿಯೂ ತಿಳಿಹಿಸಲ್ಪಡುವವು, ಮತ್ತು ಸದರೀ ತೀರ್ವೆ ವಸೂಲೀ ವಿಷಯವನ್ನು ಕುರಿತು ಬೇಕಾದ ಸಂಗತಿಯನ್ನು ತಿಳಿದುಕ್ಕೊಳ್ಳಬಹುದು.

ಹೊರೆಬಂಡಿ 1ಕ್ಕೆ	..	1 ಹಣ 4 ಕಾಸು	ಬಟ್ಟೆ ವರ್ತಕರ ಅಂಗಡಿ 1ಕ್ಕೆ	..	5 ಕಾಸು ಸಂತ್ತೀದಿವಸಗಳಲ್ಲಿ.
ಹೊರೆಯೆತ್ತು 1ಕ್ಕೆ	..		ಚಿಲ್ಲರೆ ಅಂಗಡಿ 1ಕ್ಕೆ	..	2 ಕಾಸು
ಕೂಲಿ ಹೊರೆ 1ಕ್ಕೆ	..	2 ಕಾಸು			

ಯಾವೆ ದರಖಾಸ್ತನ್ನಿಗಲಿ ಸಬಬು ನಮೂದಿಸದೇನೆ ತಿರಸ್ಕರಿಸಲಿಕ್ಕಾಗಲಿ ದರಖಾಸ್ತುಗಳು ತೃಪ್ತಿಕರಗಳಾಗಿಲ್ಲದ ಪಕ್ಷಕ್ಕೆ ಕಂಟ್ರಾಕ್ ಹರಾಜುಮಾಡಲಿಕ್ಕಾಗಿ ಸ್ವತಂತ್ರವನ್ನು ಮುನಿಸಿಪಲ್ ಬೋರ್ಡಿನವರು ತಮಗೆ ವೈಸಿಕೊಂಡಿರುತ್ತಾರೆ.

ದರೋಬಸ್ತು ದರಖಾಸ್ತುಗಳಮೇಲೆ "ಮೊರ್ಕೆಟ್ ಫೀಸ್ ವಸೂಲಿ ಗುತ್ತಿಗೆಬಗ್ಗೆ ದರಖಾಸ್ತುಗಳು" ಯೆಂತ ಬರದು ಮೊಹರ್ ಹಾಕಿ ರಿಜಿಸ್ಟರ್ ಮಾಡಿಸಿ ಬೋರ್ಡ್ ಪ್ರಸಿಡೆಂಟರ ಹೆಸರಿಗೆ ಅಂಜೇ ಮೂಲಕ ಸ್ಯ 1876ನೇ ಜೂನ್ ತಾರೀಖು 1ನೇ ಮಧ್ಯಾನ್ನಕ್ಕೆ ಪೂರ್ವದಲ್ಲಿ ರವಾನಿಸತಕ್ಕದ್ದು.

ಪ್ರತಿದರಖಾಸ್ತು ಹವುರಹಾ 500 ರೂಪಾಯಿಗೆ ಮುಜಬೂತ್ ಜಾಮೀನು ಕಳುಹಿಸತಕ್ಕದ್ದು ದರಖಾಸ್ತು ಮಂಜೂರಾಗದಪಕ್ಷಕ್ಕೆ ಜಾಮೀನು ವಾಪಸ್‌ಮಾಡಲಾಧಿತು.

ಗುತ್ತಿಗೆ ಹರಾಜಿನಲ್ಲಿ ವಿಕ್ರಯಿಸುವ ಪಕ್ಷಕ್ಕೆ ದರಖಾಸ್ತುದಾರನು 200 ರೂಪಾಯಿಗಳ ತೇವಣಿ ಇಟ್ಟು ಹೊರ್ತು ಅವನ ದರಖಾಸ್ತು ಅಂಗೀಕರಿಸಲ್ಪಡುವದಿಲ್ಲ, ದರಖಾಸ್ತು ಮಂಜೂರಾಗದ ಪಕ್ಷಕ್ಕೆ ಸದರೀ ಮೊಬಲಗು ವಾಪಸ್‌ಆಧೀತು.

ಪ್ರೆಸಿಡೆಂಟ್ಸ್, ಆಫೀಸ್ ಮಡಿಕೆರೆ, ತಾರೀಖು 24ನೇ ಏಪ್ರಿಲ್ 1876ನೇ.

E. SHAW,
Offg. President.

ಸ್ಯ ೧೮೭೬ನೇ ಇಸವಿ ಮಾರ್ಚಿ ತಿಂಗಳ ಕಾಲಸ್ಥಿತಿ ರಿಪೋರ್ಟು.

ಮೈಸೂರು ಡಿಸ್ಟ್ರಿಕ್ಟು.

ಮಳೆ.—ತಲಕಾಡು ತಾಲ್ಲೂಕು ಶಿವಾಯಿ ಮಿಕ್ಕ ತಾಲ್ಲೂಕುಗಳಲ್ಲಿ ಮಳೆ ಬಿತ್ತು. ಷಹರಿನಲ್ಲಿ 1 ಇಂಚ್ 16 ಸೆಂಟ್ಸ್ ಮಳೆ ಅಳೆಯಲ್ಪಟ್ಟಿತು. ಅನೇಕ ಕೆರೆಗಳಲ್ಲಿಯೂ ಭಾವಿಗಳಲ್ಲಿಯೂ ನೀರು ಮುಗಿಯುತ್ತಬಂತು. ಮೇವು ದುರ್ಲಭ, ಆದರೆ ಅನೇಕ ಸ್ಥಳಗಳಲ್ಲಿ ಹುಲ್ಲು ಬೆಳೆಯುತ್ತಲಿದೆ.

ಬೆಳೆ.—ಮುಂಗಾರು ಮಳೆ ಪ್ರಾರಂಭವಾದ್ದರಿಂದ ರೈತರೆಲ್ಲರೂ ಉಳುಮೆ ಕೆಲಸದಲ್ಲಿದ್ದಾರೆ, ಜೋಳ, ಹುರಳಿ, ಉದ್ದು, ಯೆಳ್ಳು ಯಿವು ಪೇರಾವಾಯಿತು. ಗನ್ನಾ ಹತ್ತಿ ಮತ್ತು ಷಾತೂತ್ ಯಿವು ಜನ್ನಾಗಿವೆ. 134—4—11 ಪೈಕಂದಾಯ ಉಳ್ಳ ಜಮೀನ್ ಸಾಗುವಳಿಗೆ ತೆಗದುಕ್ಕೊಳ್ಳಲ್ಪಟ್ಟಿತು.

ಆರೋಗ್ಯ.—ಕೈಜು ಲಾಬ್ ಉಪದ್ರವು ನಿಂತುಹೋಯಿತು. ಸಾಧಾರಣ ಕಾರಣಗಳಿಂದ 518 ಮಂದಿ ಸತ್ತರು. ಜಾನವರ್‌ಗಳಲ್ಲಿ 1891 ಕಾಲ್ನಡೆಗಳು ಸತ್ತವು. ಈ ಪೈಕಿ 45 ಅಡವಿ ಮೃಗಗಳಿಂದ ಕೊಲ್ಲಲ್ಪಟ್ಟವು.

ನಿರ್ಖ.—ಆಹಾರ್ ಜಿನಿಸೀಗಳ ನಿರ್ಖು ವೊಂದು ಪ್ರಕಾರವಾಗಿಲ್ಲ. ಮೈಸೂರಲ್ಲಿ ಅವ್ವಲ್ ತರಹ ಅಕ್ಕಿ ರೂಪಾಯಿ 1ಕ್ಕೆ $9\frac{1}{2}$ ಸೇರು ದುಯ್ಯಂ ತರಹ 10 ಸೇರು, ರಾಗಿ $18\frac{1}{4}$ ಸೇರು, ಹುರಳಿ $19\frac{1}{2}$ ಸೇರು, ಹೆಸರು 16 ಸೇರು, ಕಡ್ಲೆ $11\frac{1}{2}$ ಸೇರು, ಬೇಳೆ 10 ಸೇರು, ಈ ವೇರೆ ವಾರುತ್ತೆ.

W. PORTEOUS,
Offg. Dy. Commr.

ಹಾಸನ ಡಿಸ್ಟ್ರಿಕ್ಟು.

ಹವಾ—ಸಾಮಾನ್ಯವಾಗಿ ತೀಕ್ಷ್ಣವಾಗಿತ್ತು, ಆಗಾಗ್ಯೆ ಮೋಡ ಮುಚ್ಚುತಿತ್ತು ಹಾಸನದಲ್ಲಿ ವೊದಲು ಮಳೆ ಸದರೀ ತಿಂಗಳ 13ರಲ್ಲು ಬಿತ್ತು, ಅದು ವೊದಲು ಈಚಿಗು ಗುಡುಗು ಮಿಂಚುಗಳು ಸಹಿತ ಸ್ವಲ್ಪ ಮಳೆಯಾಗಿರುತ್ತೆ, ತಾಲ್ಲೂಕು ಜಾತ್‌ಗಳೊಳಗೂ ಹೆಚ್ಚು ಕಡಮೆಯಾಗಿ ಮಳೆ ಬಿತ್ತು, ಡಿಸ್ಟ್ರಿಕ್ಟು ವ ತಾಲ್ಲೂಕು ಹೆಡ್‌ಕ್ವಾರ್ಟರ್‌ಗಳಲ್ಲಿ ಸದರೀ ತಿಂಗಳೊಳಗೆ ಅಳೆಯಲ್ಪಟ್ಟದ್ದರ ತಪಶೀಲ್ ಈ ಕೆಳಗೆ ತಿಳಿಸಲ್ಪಡುತ್ತೆ ಹ್ಯಾಗಂದರೆ:—

ಸ್ಥಳಗಳು		ಮಳೆ—1876ನೇ ಮಾರ್ಚಿ		1875 ಮಾರ್ಚಿ,	
			ಅಂ.	ಸೆಂ.	ಅಂ. ಸೆಂ.
ಹಾಸನ	ಎಗ್ಜಿಕ್ಯೂಟಿವ್ ಇಂಜನೀಯರ್ ಕಚ್ಚೇರಿ		,,	95	3 70
	,, ಅಬಜರ್‌ವೇಟರಿ		,,	88	3 12
	,, ತಾಲ್ಲೂಕು ಕಚ್ಚೇರಿ		,,	92	ಗತ ವರುಷದ ತಪಶೀಲ್ ನಂಬತಕ್ಕದ್ದಲ್ಲವಾಗಿ ಬಿಟ್ಟರುತ್ತೆ.

	1876ನೇ ಮಾರ್ಚಿ—1875ನೇ ಮಾರ್ಚಿ.				1876ನೇ ಮಾರ್ಚಿ—1875ನೇ ಮಾರ್ಚಿ			
	ಅಂ.	ಸೆಂ.	ಅಂ.	ಸೆಂ.		ಅಂ.	ಸೆಂ.	ಅಂ. ಸೆಂ.
ಮಂಜರಾಬಾದ್ (ಸಕಲೇಶಪುರ)	2	30	1	70	ಚನ್ನರಾಯಪಟ್ಣ ..	0	15	0 5
ಅರಕಲ್‌ಗೂಡ್ ..	1	70	1	2½	ನಾಗಮಂಗಲ ..	0	60	1 12
ಅತ್ತಿಗುಪ್ಪೆ ..	0	55	0	0	ಹಾರನಹಳ್ಳಿ ..	0	40	0 91
ಬೇಲೂರು ..	1	49	0	34	ನರಸೀಪುರ ..	1	59	0 0

ಜಲವಸತಿ—ದೊಡ್ಡ ಕೆರೆಗಳ ಪೈಕಿ 30೭½ ಕೆರೆಗಳಲ್ಲಿ ಅರ್ಧತಿಂಗಳ ಮೊದಲು ಒಂದು ತಿಂಗಳ ವರಿಗೂ, ಸಣ್ಣ ಕೆರೆಗಳ ಪೈಕಿ 2,805 ಕೆರೆಗಳಲ್ಲಿ 15 ದಿನಗಳ ವರಿಗು ಆಗುವಷ್ಟು ನೀರು ನಿಂತಿತ್ತು, 37 ದೊಡ್ಡ ಕೆರೆಗಳು 1715 ಸಣ್ಣ ಕೆರೆಗಳು ಒಣಗಿ ಹೋದವು.

ಜಮ್ಮಿಗಳು—98 ರೂಪಾಯಿ 12 ಆಣೆ 2 ಪೈ ಕಂದಾಯವುಳ್ಳ ಜಮ್ಮಿಗಳು ಹಾಸನ, ಮಂಜರಾಬಾದ್, ಚನ್ನರಾಯಪಟ್ಣ ತಾಲ್ಲೂಕುಗಳೊಳಗೆ ತೆಗದುಕ್ಕೊಳ್ಳಲ್ಪಟ್ಟವು, ಕುಲ್ 907 ರೂ. 11 ಆ. 2 ಪೈ ಕಂದಾಯವುಳ್ಳ ಜಮ್ಮಿಗಳು ಮಂಜರಾಬಾದ್, ಬೇಲೂರು, ಚನ್ನರಾಯಪಟ್ಣ, ಹಾರನಹಳ್ಳಿ ಈ ತಾಲ್ಲೂಕುಗಳಲ್ಲಿ ರಾಜೀನಾಮೇ ಕೊಡಲ್ಪಟ್ಟವು.

ಫಸಲ್—ಮಂಜರಾಬಾದಿನ ಮಲನಾಡ್ ತಾಲ್ಲೂಕಿನಲ್ಲಿಯೂ, ಚನ್ನರಾಯಪಟ್ಣ, ಅತ್ತಿಗುಪ್ಪೆ, ನಾಗಮಂಗಲ ಈ ಮುಂತಾದ ಮೈದಾನ ತಾಲ್ಲೂಕುಗಳಲ್ಲಿಯೂ, ಭತ್ತದ ಫಸಲ್ ವಳ್ಳೀ ಸ್ಥಿತಿಯಲ್ಲಿತ್ತು, ಕೆಲವು ಸ್ಥಳಗಳಲ್ಲಿ ಸದರೀ ಫಸಲ್ ಕಟುವಾಗಿರುತ್ತೆ. ಹಾಸನ, ಬೇಲೂರು ತಾಲ್ಲೂಕುಗಳೊಳಗೆ ಗನ್ನಾ ಫಸಲ್ ನೀರಿಲ್ಲದೆ ಒಣಗಿ ಹೋಗುತ್ತಿದೆ. ಕಾಫೀ ತಾಲ್ಲೂಕುಗಳೊಳಗೆ ಕಾಫೀ ಗಿಡಗಳು ಹುವ್ವೆ ಬಿಟ್ಟರುತ್ತವೆ.

ದಾರಣೆವಾಸೀ—ಆಲೂರು ಸಂತೆಯಲ್ಲಿದ್ದ ದಾರಣೆವಾಸಿಯ ತಪಶೀಲ್ ಈ ಕೆಳಗೆ ತಿಳಿಸಲ್ಪಡುತ್ತೆ.

ಜಿನಿಸೀ	1876ನೇ ಮಾರ್ಚಿ	1876ನೇ ಫಿಬ್ರವರೀ	1875ನೇ ಮಾರ್ಚಿ	ಜಿನಿಸೀ	1876ನೇ ಮಾರ್ಚಿ	1876ನೇ ಫಿಬ್ರವರೀ	1875ನೇ ಮಾರ್ಚಿ
ಅವ್ವಲ್ ತರದ ಅಕ್ಕಿ ರೂ. 1ಕ್ಕೆ	12	12	16 ಶೇರು	ರಾಗಿ ರೂಪಾಯಿ 1ಕ್ಕೆ	20	20	33 ಶೇರು
ದುಯ್ಯಂ ತರಹ ಡಿಟೋ ,,	13¾	13¾	18 ,,	ಹುರಳಿ ಡಿಟೋ ,,	15½	16½	24 ,,

1876ನೇ ಫಿಬ್ರವರೀ, ಮಾರ್ಚಿ ತಿಂಗಳಿಗೆ ಯಿದ್ದ ದಾರಣೆಯ ವ್ಯತ್ಯಾಸವು ಮೇಲೆ ಕಂಡ ಪ್ರಕಾರ ಹುರಳೀ ಮಾತ್ರ ಫಿಬ್ರವರೀಯಲ್ಲಿ 1 ಶೇರು ಜಾಸ್ತೀಯಾಗಿದೆ ಕಳ್ಳೆದ ಇನವೀ ತಿಂಗಳಲ್ಲಿ ಜಿನಸೀ ದಾರಣೆ ಬಹಳ ಕಮ್ಮಿಯಾಗಿತ್ತು ಮುಖ್ಯವಾಗಿ ರಾಗೀ ಆಮೇರೆ ಯಿತ್ತು.

ಜನಾರೋಗ್ಯ—ಹಿಂದಿನ ತಿಂಗಳಷ್ಟು ಜನಮರಣ ಸದರೀ ತಿಂಗಳಲ್ಲಿಲ್ಲದಿದ್ದಾಗ್ಯೂ ಸಾಮಾನ್ಯವಾಗಿ ಆರೋಗ್ಯಸ್ಥಿತಿ ಚನ್ನಾಗಿರಲಿಲ್ಲವು. ಸದರೀ ಡಿಸ್ಟ್ರಿಕ್ಟಿನಲ್ಲಿ ಪುನ್ಶ್ಚ ಉಖಾಲ್ ಜುಲಾಬ್ ಕಾಣಿಸಿಕ್ಕೊಂಡಿತು ಸದರೀ ರೋಗದಿಂದ 27 ಮಂದಿ ಹೋದರು ಐದು ತಾಲ್ಲೂಕುಗಳೊಳಗೆ ರೋಗ ತಗಲಿತು ಯಾವದಂದರೆ.

ಹಾಸನ ತಾಲ್ಲೂಕು	ಹಾಸನ ಕಸಬಾ	1 0	ಚನ್ನರಾಯಪಟ್ಣ ತಾ॥	ಯರಗನಾಳು ಹೋಬಳಿ	1 0
	ಆಲೂರು ಹೋಬಳಿ	3 4		ಶ್ರವಣ ಬೆಳಗೊಳ	1 2
ಮಂಜರಾಬಾದ್	ಉಗ್ಗಿಹಳ್ಳಿ ,,	3 0	ಹಾರನಹಳ್ಳಿ	ಹಾರನಹಳ್ಳಿ ಕಸಬಾ	1 0
	ಬಂಕೆಲ್ ,,	6 9		ಅರಸಿಕೆರೆ ಹೋಬಳಿ	3 4
ಬೇಲೂರು	ಬೇಲೂರು ಕಸಬಾ	5 0			
	ಅಂಬಲೆ ಹೋಬಳಿ	1 0		ಜುಮ್ಲಾ	27
	ಅಡಗೂರು ,,	2 8			

ಯಿವು ಶಿವಾಯ್ಲಿ ಈ ಕೆಳಗೆ ಬರುವ ಕಾರಣಗಳಿಂದ 301 ಮಂದಿ ಅಂತು 328 ಮಂದಿ ಡಿಸ್ಟ್ರಿಕ್ಟು ಮುಳಿಸತ್ತಿರುತ್ತಾರೆ, ಹಿಂದಿನ ತಿಂಗಳಲ್ಲಿ 344 ಮಂದಿ, 1875ನೇ ಮಾರ್ಚೀ ತಿಂಗಳಲ್ಲಿ 428 ಹೋದರು.

ಜ್ವರದಿಂದ 208, ಹೊಟ್ಟೆ ಸುಗ್ಗಿನಿಂದ 34, ಆತ್ಮಹತ್ಯದಿಂದ 1, ಘಾಯಪಟ್ಟದ್ದರಿಂದ 1, ಅಕಸ್ಮಾತ್ತಾಗಿ 4, ಹಾವು ಕಚ್ಚಿದ್ದರಿಂದ 2, ಯಿತರ ಕಾರಣಗಳಿಂದ 51, ಜುಮ್ಲಾ 301,

136, ಜನನಗಳಾದಂತೆ ರಿಜಿಸ್ಟರ್ ನವೂದಿರುತ್ತೆ. ಹಿಂದಿನ ತಿಂಗಳಲ್ಲಿ 134, ಜನನಗಳಾದವು.

ಕಾಲ್ನಡೆ,—ಬೇಲೂರು ಮತ್ತು ಅತ್ತಿಗುಪ್ಪ ತಾಲ್ಲೂಕುಗಳಲ್ಲಿ ಕಾಲುಜ್ವರ ಬಾಯಿಜ್ವರ ಕಾಲ್ನಡೆಗೆ ತಗಲಿ ಯಿತ್ತು. ಅಷವೀ ಮೈಗಳಿಂದ ಕೊಲ್ಲಲ್ಪಟ್ಟ 50, ಕೀರಿ ಯಲ್ಲಾ ಕಾರಣಗಳಿಂದಲೂ, 1941 ಸತ್ತವು. ಹಿಂದಿನ ತಿಂಗಳಲ್ಲಿ 1654 ಸತ್ತವು. 1875ನೇ ಇಸವಿ ಮಾರ್ಚೀ ತಿಂಗಳಲ್ಲಿ 1978 ಸತ್ತವು.

A. SRINIVASAIENGAR,
For Dy. Commr.

ಮದರಾಸ್ ರೆಯಿಲ್‌ವೆ.

ಮೆಣಸಿಗೆ ಮಜೂರೀ ಕಮ್ಮಿ ಮಾಡಿದ್ದು.

ಮಾಹೇ ಮಜಕೂರ್ 5ನೇ ಮಕ್ತುಂ ಲಾಗಾಯಿತು ಮತ್ತು ಆ ತರುವಾಯ ಮೆಣಸು ಬೇಪೂರಿಂದ ಮದರಾಸಿಗೆ, 82 ಪೌಂಡ್‌ಗಳ ಬಾಬತು ಮಣ 1ಕ್ಕೆ 8 ಆಣೆ 10 ಪೈ ಪ್ರಕಾರ ವಿಶೇಷ ದರದ ಮೇರೆ ಸಾಗಿಸಲ್ಪಡುವದು.

ಮದರಾಸ್ ರೆಯಿಲ್‌ವೆನಲ್ಲಿ ಯಿತರ ಯಾವ ಸ್ಟೇಷನ್ನಿಂದ ಅಥವಾ ಯಾವ ಸ್ಟೇಷನ್ನಿಗೆ ಮೆಣಸು ಸಾಗಿಸುವಾಗ್ಯೆ ಮೈಲ್ 1ಕ್ಕೆ ಟನ್ 1ಕ್ಕೆ 1ನೇ ಕ್ಲಾಸ್ ಬಾಬತು ಯೂ 12 ಪೈಗಳು ಚಾರ್ಜು ಮಾಡಲ್ಪಡುವದು.

ತಾರೀಖು 5ನೇ ಏಪ್ರಲ್ 1876.

ಆರ್. ಬಿ. ಎಲ್ವಿನ್,
ಏಜಂಟ್ ಅಂಡ್ ಮಾನೇಜರ್.

ಫಿನಾನ್ಷಿಯಲ್ ಇಲಾಖೂ.

76—77ನೇ ಇಸವಿ ಬಗೆ ಪ್ರೊವಿನ್ಷಿಯಲ್ ಬಡ್ಜೆಟ್ ಮಂಜೂರಾದ್ದು.

ಸರ್ಕ್ಯುಲರ್ ನಂಬರ್ 1274, ತಾರೀಖು 26ನೇ ಏಪ್ರೆಲ್ 1876.

1876ನೇ ಮಾರ್ಚೀ 31ನೇ ಮಕ್ತುಂ 1266ನೇ ನಂಬರ್ ಸರ್ಕ್ಯುಲರ್ ವಿಷಯದಲ್ಲಿ ಡೆಪ್ಯುಟಿ ಅಕೌಂಟೆಂಟ್ ಜನರಲ್‌ಯವರು ಪ್ರಸಿದ್ಧಪಡಿಸುವದೇನಂದರೆ,—1876—77ನೇ ಇಸವಿ ಬಗೆ ಮೈಸೂರು ಬಡ್ಜೆಟ್ ಅಂದಾಜಿಗಳು ಇಂಡ್ಯ ಗವರ್ನಮೆಂಟ್‌ನವರಿಂದ ಅಂಗೀಕರಿಸಲ್ಪಟ್ಟಿರುತ್ತವೆ.

H. HUDSON,
Dy. Accts. Genl. in Mysore.

ನೋಟಸ್.

ನಾರ್ತ ಆರ್ಕಾಡ್ ಡಿಸ್ಟ್ರಿಕ್ಟಿನೊಳಗೆ ಅನೇಕ ಕಡೆಯಲ್ಲಿಯೂ, ಪುಂಗನೂರು ಕಸಬೇಯಲ್ಲಿ ಸಹ ಪುಖಾಲ್ ಜುಲಾಬ್ ವುಪದ್ರವ ಯಿನ್ನೂ ವ್ಯಾಪಿಸಿರುವದ್ದರಿಂದ ಪುಂಗನೂರಲ್ಲಿ ಯಿಪ್ಪರಲ್ಲೇ ಆಗುವ ರಥೋತ್ಸವಕ್ಕೆ ಹೋಗಲಪೇಕ್ಷಿಸುವ ಜನಗಳು ಈ ಸಂವತ್ಸರವೂ ಅಲ್ಲಿ ಹೋಗೋಣದರಿಂದ ಉಂಟಾಗುವ ಹಾನಿಗೆ ಪೊಳಪಡುವರೆಂದು ಇದರಿಂದ ಎಚ್ಚರಿಸಲ್ಪಟ್ಟಿರುತ್ತಾರೆ.

W. H. WHITESIDE,
Collector, North Arcot.